JANUARY 20, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಬಾಗಲಕೋಟೆ ಜಿಲ್ಲೆ, ಐತಿಹಾಸಿಕ ಬಾದಾಮಿ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ, 2 ಸಾವಿರ ಕೋಟಿ ರೂಪಾಯಿ ಅನುದಾನ.
- ಪ್ರಧಾನಮಂತ್ರಿ ಆವಾಸ್ ಯೋಜನೆ; 2 ಲಕ್ಷ ಅರ್ಹ ಫಲಾನುಭವಿಗಳಿಗೆ, 42 ಸಾವಿರದ 345 ಮನೆಗಳು, 24ನೇ ತಾರೀಖು, ಹುಬ್ಬಳ್ಳಿಯಲ್ಲಿ ಹಸ್ತಾಂತರ.
- ಹಂಪಿ ಉತ್ಸವ; ಪದ್ಮಶ್ರೀ ಮಂಜಮ್ಮ ಜೋಗತಿ ಅವರ ಉಪಸ್ಥಿತಿಯಲ್ಲಿ, ವಿವಿಧ ಕ್ಷೇತ್ರಗಳ ಕಲಾವಿದರ ಸಭೆ.
- ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟ; ಡ್ರ್ಯಾಗನ್ ಬೋಟ್ ಸ್ಪರ್ಧೆಯಲ್ಲಿ, ಬೆಂಗಳೂರು ನಗರ ತಂಡ, ಚಿನ್ನದ ಸಾಧನೆ.

<><><>

ಈಗ ವಾರ್ತೆಗಳ ವಿವರ

<><><>

ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಬಾದಾಮಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ, ಪ್ರಸಕ್ತ ಅವಧಿಯಲ್ಲಿ, 2 ಸಾವಿರ ಕೋಟಿ ರೂಪಾಯಿ ಅನುದಾನ ನೀಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಾದಾಮಿಯ, ಇಮ್ಮಡಿ ಪುಲಿಕೇಶಿ ವೇದಿಕೆಯಲ್ಲಿ ಆಯೋಜಿಸಲಾಗಿದ್ದ, ಚಾಲುಕ್ಯ ಉತ್ಸವ 2026 ಕ್ಕೆ ನಿನ್ನೆ ಇಳಿ ಸಂಜೆ ಚಾಲನೆ ನೀಡಿ, ಮಾತನಾಡಿದರು. ಕೆರೂರು ಏತ ನೀರಾವರಿ ಯೋಜನೆಗಾಗಿ, ಸಾವಿರದ ನಾಲ್ಕು ನೂರು ಕೋಟಿ ರೂಪಾಯಿ ನೀಡಲು, ಸಚಿವ ಸಂಪುಟ ಅನುಮೋದಿಸಿದೆ. ಬಾದಾಮಿ, ಕೆರೂರು ಸೇರಿದಂತೆ, 28 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ರಸ್ತೆ ಅಭಿವೃದ್ಧಿ ಸೇರಿದಂತೆ, ಒಟ್ಟು 540 ಕೋಟಿ ರೂಪಾಯಿಗೂ ಅಧಿಕ ಅನುದಾನ ನೀಡಲಾಗಿದೆ, ಎಂದರು. 2018ರಲ್ಲಿ ತಾವು, ಚಾಮುಂಡಿ ಕ್ಷೇತ್ರ ಹಾಗೂ ಬಾಗಲಕೋಟೆ ಜಿಲ್ಲೆ ಬಾದಾಮಿ ಕ್ಷೇತ್ರದಿಂದ ಸ್ಪರ್ಧಿಸಿದ್ದು, ಬಾದಾಮಿ ಕ್ಷೇತ್ರದ ಜನತೆಯ ಬೆಂಬಲವನ್ನು ಮರೆಯಲಾಗದು ಎಂದು, ಮುಖ್ಯಮಂತ್ರಿ ಸ್ಮರಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 40 ಸೆಕೆಂದುಗಳು

<><><>

ಚಾಲುಕ್ಯ ಉತ್ಸವದ ಎರಡನೇ ದಿನವಾದ ಇಂದು, ಬಾಗಲಕೋಟೆ ಜಿಲ್ಲೆಯ, ಪಟ್ಟದಕಲ್ಲಿನ ವಿಕ್ರಮಾದಿತ್ಯ ವೇದಿಕೆಯಲ್ಲಿ, ಮಧ್ಯಾಹ್ನ 3 ಗಂಟೆಯಿಂದ ಸಂಜೆ 6.30ರ ವರೆಗೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಜರುಗಲಿವೆ. ಸಂಜೆ 6.30ಕ್ಕೆ, ಪ್ರಧಾನ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಪಾಲ್ಗೊಳ್ಳಲಿದ್ದಾರೆ. ಕುಚಿಪುಡಿ, ತೊಗಲು ಬೊಂಬೆಯಾಟ, ದೊಡ್ಡಾಟ ನೃತ್ಯ, ಭರತನಾಟ್ಯ ಹಾಗೂ ಹಾಸ್ಯ ಸಂಜೆ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ, ಬಡ ಮತ್ತು ಮಧ್ಯಮ ವರ್ಗದ 2 ಲಕ್ಷ ಅರ್ಹ ಫಲಾನುಭವಿಗಳಿಗೆ, 42 ಸಾವಿರದ 345 ಮನೆಗಳನ್ನು, ರಾಜ್ಯದ 28 ಜಿಲ್ಲೆಗಳಲ್ಲಿ, ಏಕಕಾಲಕ್ಕೆ ಉಚಿತವಾಗಿ ಹಸ್ತಾಂತರಿಸಲಾಗುತ್ತಿದೆ ಎಂದು, ಕಾರ್ಮಿಕ ಖಾತೆ ಸಚಿವ, ಸಂತೋಷ ಲಾಡ ತಿಳಿಸಿದ್ದಾರೆ. ಧಾರವಾಡ, ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಅವರು ಪೂರ್ವಭಾವಿ ಸಭೆ ನಡೆಸಿದರು. ಇದೇ 24, ಶನಿವಾರದಂದು, ಹುಬ್ಬಳ್ಳಿಯ ಮಂಟೂರು ಬಳಿ, ಕಾರ್ಯಕ್ರಮ ಆಯೋಜಿಸಲಾಗಿದೆ. ಧಾರವಾಡ ಜಿಲ್ಲೆಯಲ್ಲಿ ಒಟ್ಟು 2 ಸಾವಿರದ 169 ಮನೆಗಳು ಮಂಜೂರು ಮಾಡಲಾಗಿದೆ. ಘೋಷಿತ ಕೊಳೆಗೇರಿಯಲ್ಲಿ, ಸಾವಿರದ 137 ಕಚ್ಚಾ ಮನೆಗಳನ್ನು, ಪಕ್ಕಾ ಮನೆಗಳನ್ನಾಗಿ ಪುನರ್ ನಿರ್ಮಿಸಲಾಗಿದೆ. ಸಾವಿರದ 32 ಮನೆಗಳಿರುವ ವಸತಿ ಸಮುಚ್ಛಯ ನಿರ್ಮಿಸಲಾಗಿದ್ದು, ಜಿಲ್ಲೆಯ 3 ಸಾವಿರ ಅರ್ಹ ಫಲಾನುಭವಿಗಳು ಹಕ್ಕು ಪತ್ರ ಪಡೆಯಲಿದ್ದಾರೆ ಎಂದರು. ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಸತಿ ಖಾತೆ ಸಚಿವ, ಜಮೀರ ಅಹ್ಮದ್ ಖಾನ್ ಭಾಗವಹಿಸಲಿದ್ದಾರೆ ಎಂದರು. ವಸತಿ ಖಾತೆ ಖಾತೆ ಸಚಿವ ಜಮೀರ್ ಅಹ್ಮದ್ ಖಾನ್ ಮಾತನಾಡಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ, ಕರ್ನಾಟಕದಲ್ಲಿ, ಒಟ್ಟು 1 ಲಕ್ಷ 80 ಸಾವಿರದ 253 ಮನೆಗಳು ಮಂಜೂರಾಗಿವೆ. ಆ ಪೈಕಿ, 86 ಸಾವಿರದ 651 ಮನೆಗಳು ನಿರ್ಮಾಣಗೊಂಡಿವೆ ಎಂದರು.

<><><>

ಆವರ್ತ ನಿಧಿ, ಮಾದರಿ ಮಾರುಕಟ್ಟೆ, ಯುವ ನೇಕಾರರನ್ನು ಆಕರ್ಷಿಸಲು ವೃತ್ತಿ ಪ್ರೇರೇಪಣಾ ನಿಧಿ ಸೇರಿದಂತೆ, ಹಲವು ಪ್ರಮುಖ ಅಂಶಗಳನ್ನು ಒಳಗೊಂಡ, ನೂತನ ಜವಳಿ ನೀತಿ, ಶೀಘ್ರ ಜಾರಿಗೊಳ್ಳಲಿದೆ ಎಂದು, ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಶಾಸಕರ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡು, ಕೈಮಗ್ಗ ನೇಕಾರರ ಏಳಿಗೆಗೆ ಪೂರಕವಾದ, ನೂತನ ಜವಳಿ ನೀತಿಯ ಹಲವು ಪ್ರಮುಖ ನಿರ್ಧಾರಗಳನ್ನು ಅವರು ಕೈಗೊಂಡಿದ್ದಾಗಿ, ಹೇಳಿದರು. ಕಲಬುರಗಿಯಲ್ಲಿ ಬೃಹತ್ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಮೂಲಸೌಕರ್ಯ ಅಭಿವೃದ್ಧಿಗೆ, 390 ಕೋಟಿ ರೂಪಾಯಿ ಒದಗಿಸಲಾಗಿದೆ ಎಂದರು.

<><><>

ಕೃಷಿ ಉತ್ಪನ್ನಗಳನ್ನು, ಕೈಗಾರಿಕೆಗಳ ಸಹಯೋಗದೊಂದಿಗೆ, ಮೌಲ್ಯವರ್ಧಿಸಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ, ಲಾಭಕ್ಕೆ ಮಾರಾಟ ಮಾಡಲು, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ, ರೈತರಿಗೆ ಸಹಕಾರಿಯಾಗಿದೆ ಎಂದು, ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ, ಸುರೇಶಕುಮಾರ ಜೈನ ತಿಳಿಸಿದ್ದಾರೆ. ಮೈಸೂರಿನಲ್ಲಿ, ರೈತ ಸಮೃದ್ಧಿ ಯೋಜನೆಯಡಿ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರದಲ್ಲಿ ಕೃಷಿಕರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ನೂತನ ಪೊಲೀಸ್ ತರಬೇತಿ ಅಕಾದೆಮಿ, ಕೋಲಾರ ಗೋಲ್ಡ್ ಫೀಲ್ಡ್ಸ್‌ನಲ್ಲಿ ನಿರ್ಮಾಣಗೊಳ್ಳಲಿದ್ದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ಇಂದು ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ ಎಂದು, ಕೆ.ಜಿ.ಎಫ್. ಶಾಸಕಿ ಎಂ.ರೂಪಕಲಾ ಶಶಿಧರ ತಿಳಿಸಿದ್ದಾರೆ. ಕೋಲಾರದಲ್ಲಿ ಮಾತನಾಡಿದ ಅವರು, ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ನೂತನ ಪೊಲೀಸ್ ತರಬೇತಿ ಅಕಾದೆಮಿ ಸ್ಥಾಪನೆಗೊಂಡು, ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು, ರಾಜ್ಯ ಸರ್ಕಾರ ಯೋಜಿಸಿದೆ. ಜನತೆಯ ಸುರಕ್ಷತೆ ದೃಷ್ಟಿಯಿಂದ, ಅತ್ಯಾಧುನಿಕ ತರಬೇತಿ ಕೇಂದ್ರ ರೂಪುಗೊಳ್ಳುತ್ತಿದೆ ಎಂದರು.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃ ಷ್ಣನ್ ಅವರು, ನಾಳೆ, ತುಮಕೂರಿಗೆ ಆಗಮಿಸಲಿದ್ದಾರೆ. ನಾಳೆ ಬೆಳಗ್ಗೆ 11 ಗಂಟೆಗೆ, ಶ್ರೀ ಸಿದ್ಧಗಂಗಾ ಮಠದಲ್ಲಿ, ಶ್ರೀ ಶಿವಕುಮಾರ ಸ್ವಾಮೀಜಿ ಅವರ, ಏಳನೇ ಪುಣ್ಯ ಸ್ಮರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ, ಬೆಂಗಳೂರಿನ ಸಿ.ಎಂ.ಆರ್. ತಾಂತ್ರಿಕ ಮಹಾವಿದ್ಯಾಲಯದ, ಬೆಳ್ಳಿ ಹಬ್ಬದ ಸಮಾರಂಭದಲ್ಲಿ, ಅತಿಥಿಯಾಗಿ ಭಾಗವಹಿಸಲಿದ್ದಾರೆ.

<><><>

ಸ್ವಿಟ್ಜರ್‌ಲ್ಯಾಂಡ್ ನ, ದಾವೋಸ್ ನಲ್ಲಿ ಐದು ದಿನಗಳ, ವಿಶ್ವ ಆರ್ಥಿಕ ವೇದಿಕೆಯ ಮಹತ್ವದ ಸಭೆ ಆಯೋಜಿತವಾಗಿದೆ. ಭಾರತ ಸರ್ಕಾರದ ಪ್ರತಿನಿಧಿಯಾಗಿ, ಕೇಂದ್ರದ ಹಿರಿಯ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಂಡಿದ್ದಾರೆ. ವಿಶ್ವ ಆರ್ಥಿಕ ಸಭೆಯಲ್ಲಿ, ಭಾರತದ ನಾಯಕತ್ವವನ್ನು ಅವರು ಪ್ರತಿಪಾದಿಸಲಿದ್ದಾರೆ.

<><><>

ಬೆಳಗಾವಿಯ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ, 2023ನೇ ಸಾಲಿನ ಯುವ ಸಾಹಿತ್ಯ ಪುಸ್ತಕ ಪ್ರಶಸ್ತಿ, ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ, ಯುವ ಸಾಹಿತಿ, ಹಾಗೂ ಪ್ರಸ್ತುತ ಕಾಸರಗೋಡಿನ, ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ, ಸೇವೆ ಸಲ್ಲಿಸುತ್ತಿರುವ, ಗೋವಿಂದರಾಜು ಭಾಜನರಾಗಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಪ್ರಶಸ್ತಿ ನೀಡಿ, ಗೌರವಿಸಿದರು. 'ನಕ್ಷತ್ರಕ್ಕಂಟಿದ ಮುಟ್ಟಿನ ನೆತ್ತರು' ಕಥಾ ಸಂಕಲನಕ್ಕೆ, 10 ಸಾವಿರ ರೂಪಾಯಿ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಫಲಕ ಪಡೆದ ಗೋವಿಂದರಾಜು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಖುಷಿ ಹಂಚಿಕೊಂಡಿದ್ದಾರೆ.

<><><>

ಗೋವಿಂದರಾಜು ಧ್ವನಿ 32 ಸೆಕೆಂದುಗಳು

<><><>

ಪದ್ಮಶ್ರೀ ಮಂಜಮ್ಮ ಜೋಗತಿ ಅವರ ಉಪಸ್ಥಿತಿಯಲ್ಲಿ, ಹಂಪಿ ಉತ್ಸವದ ಹಿನ್ನೆಲೆ, ವಿಜಯನಗರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ವಿವಿಧ ಕ್ಷೇತ್ರಗಳ ಕಲಾವಿದರ ಸಭೆ, ನಡೆಯಿತು. ಹಂಪಿಯಲ್ಲಿ, ಫೆಬ್ರುವರಿ 13 ರಿಂದ 15ರ ವರೆಗೆ, ಸಂಭ್ರಮದ ಹಂಪಿ ಉತ್ಸವ ನಡೆಯಲಿದ್ದು, ಸ್ಥಳೀಯ ಕಲಾವಿದರಿಗೆ, ವಿವಿಧ ವೇದಿಕೆಗಳಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ, ಪೂರ್ವಭಾವಿ ಸಭೆ ನಡೆಸಿದ್ದಾಗಿ, ವಿಜಯನಗರ ಜಿಲ್ಲಾಧಿಕಾರಿ, ಕವಿತಾ ಮನ್ನಿಕೇರಿ ತಿಳಿಸಿದರು.

<><><>

ತುಮಕೂರು ಆತಿಥ್ಯದಲ್ಲಿ, ನಾಡಿದ್ದು 22 ರಂದು ಸಮಾರೋಪಗೊಳ್ಳಲಿರುವ, ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ, ನಿನ್ನೆ ತುಮಕೂರಿನ ಅಮಾನಿಕೆರೆಯಲ್ಲಿ ಜರುಗಿದ, ಡ್ರ್ಯಾಗನ್ ಬೋಟ್ 500 ಮೀಟರ್ ಸ್ಪರ್ಧೆಯಲ್ಲಿ, ಬೆಂಗಳೂರು ನಗರ ತಂಡ, ಚಿನ್ನದ ಪದಕ ಗೆದ್ದಿತು. ಬೆಂಗಳೂರು ಗ್ರಾಮಾಂತರ ತಂಡ ಬೆಳ್ಳಿ, ಚಿತ್ರದುರ್ಗ ತಂಡ ಕಂಚಿನ ಪದಕ ಜಯಿಸಿದವು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಬಾಗಲಕೋಟೆ ಜಿಲ್ಲೆ, ಐತಿಹಾಸಿಕ ಬಾದಾಮಿ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ, 2 ಸಾವಿರ ಕೋಟಿ ರೂಪಾಯಿ ಅನುದಾನ.

ಪ್ರಧಾನಮಂತ್ರಿ ಆವಾಸ್ ಯೋಜನೆ; 2 ಲಕ್ಷ ಅರ್ಹ ಫಲಾನುಭವಿಗಳಿಗೆ, 42 ಸಾವಿರದ 345 ಮನೆಗಳು, 24ನೇ ತಾರೀಖು, ಹುಬ್ಬಳ್ಳಿಯಲ್ಲಿ ಹಸ್ತಾಂತರ.

ಹಂಪಿ ಉತ್ಸವ; ಪದ್ಮಶ್ರೀ ಮಂಜಮ್ಮ ಜೋಗತಿ ಅವರ ಉಪಸ್ಥಿತಿಯಲ್ಲಿ, ವಿವಿಧ ಕ್ಷೇತ್ರಗಳ ಕಲಾವಿದರ ಸಭೆ.

ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟ; ಡ್ರ್ಯಾಗನ್ ಬೋಟ್ ಸ್ಪರ್ಧೆಯಲ್ಲಿ, ಬೆಂಗಳೂರು ನಗರ ತಂಡ, ಚಿನ್ನದ ಸಾಧನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>